# ಮೆಳ್ಳೆಗಣ್ಣು

## ಅದೃಷ್ಟವೋ? ಕುರುಡುತನವೋ?



ಸೌಂದರ್ಯಕ್ಕೆ ಅಡ್ಡಿಯಾಗದ ಮೆಳ್ಳೆಗಣ್ಣು

ಮೆಳ್ಳೆಗಣ್ಣಿಗೆ ಇಂಥದ್ದೇ ಕಾರಣ ಎಂದು ಸ್ಪಷ್ಟವಾಗಿ ಎಲ್ಲೂ ಇಲ್ಲ. ಮೆಳ್ಳೆಗಣ್ಣಿಗೆ ಕುಟುಂಬದ ಹಿನ್ನೆಲೆಯೂ ಕಾರಣವಾಗಬಹುದು. ಈ ಚಿಕಿತ್ಸೆಗೆ ಬರುವ ಬಹುತೇಕರ ಬಳಿ ಅವರ ಒಂದೂ ಭಾವಚಿತ್ರ ಇರುವುದಿಲ್ಲ. ಯಾವುದೇ ಸಮಾರಂಭಗಳಿಗೂ ಹೋಗಲು ಅವರು ಹಿಂಜರಿಯುತ್ತಾರೆ; ಛಾಯಾಚಿತ್ರ ತೆಗೆಸಿಕೊಳ್ಳಲು ನಿರಾಕರಿಸುತ್ತಾರೆ. ಹೀಗಾಗಿ ಈ ಮಕ್ಕಳು ಕೀಳರಿಮೆ ಹಾಗೂ ಒತ್ತಡದಿಂದ ಬಳಲುತ್ತಿರುತ್ತಾರೆ.

■ ಡಾ.ಅರುಣ್ ಸಂಪ್ರತಿ

28 ವರ್ಷದ ರಾಜೇಶ್‌ಗೆ ಕೈತುಂಬಾ ಸಂಬಳದ ನೌಕರಿ ಸಿಕ್ಕಿತ್ತು. ಕೊನೆಯ ಪರೀಕ್ಷೆಯಾದ 'ಆರೋಗ್ಯ ತಪಾಸಣೆ' ಮಾತ್ರ ಬಾಕಿ ಇತ್ತು. ತನಗೇನೂ ತೊಂದರೆ ಇಲ್ಲ ಎಂಬ ದೃಢ ಆತ್ಮವಿಶ್ವಾಸ ಆತನಲ್ಲಿತ್ತು. ಆದರೆ ಆತನಿಗೆ ಭಾರೀ ಆಘಾತವೊಂದು ಕಾದಿತ್ತು. ರಾಜೇಶ್‌ನ ಬಲಗಣ್ಣು ಮೆಳ್ಳೆಗಣ್ಣಾದ್ದರಿಂದ ಆರೋಗ್ಯ ತಪಾಸಣೆಯಲ್ಲಿ ನಪಾಸಾದ!

ಬಾಲ್ಯದಿಂದ ಆತನಿಗೆ ಮೆಳ್ಳೆಗಣ್ಣು ಇದೆ. ಆದರೆ ಆತನ ಪೋಷಕರು ಮೆಳ್ಳೆಗಣ್ಣು ಅದೃಷ್ಟದ ಸಂಕೇತ ಎಂದೇ ಭಾವಿಸಿದ್ದರು. ಹೀಗಾಗಿ ಅವರು ವೈದ್ಯರ ಬಳಿ ಆತನ ಕಣ್ಣಿನ ತಪಾಸಣೆ ಮಾಡಿಸಲೇ ಇಲ್ಲ. ಜತೆಗೆ ಆತನ ಎಡಗಣ್ಣಿನ ದೃಷ್ಟಿ ಚೆನ್ನಾಗಿದ್ದರಿಂದ ಆತ ಬಲಗಣ್ಣಿನ ದೋಷವನ್ನು ಗಣನೆಗೇ ತೆಗೆದುಕೊಳ್ಳಲಿಲ್ಲ. ಆರೋಗ್ಯ ತಪಾಸಣೆಯಲ್ಲಿ ನಪಾಸಾದ್ದರಿಂದ ಆ ಕೆಲಸವೂ ಲಭಿಸಲಿಲ್ಲ.

ಮೆಳ್ಳೆಗಣ್ಣು ಉಂಟಾಗುವುದರಿಂದ ಕಣ್ಣು ಒಳಗೆ ಅಥವಾ ಹೊರಕ್ಕೆ ಹಾಗೂ ಮೇಲಕ್ಕೆ ಅಥವಾ ಕೆಳಕ್ಕೆ ಹೊರಳುತ್ತದೆ. ಕಣ್ಣಿನ ಸ್ನಾಯು ಸರಿಯಾಗಿ ಸಮದೂಗದಿದ್ದಾಗ ಈ ರೀತಿ ಹೊರಳುವಿಕೆ ಕಂಡುಬರುತ್ತದೆ. ಇದರೊಂದಿಗೆ ನರದಿಂದ ಹೊರಡುವ ತಪ್ಪು ಸಂದೇಶಗಳು ಹಾಗೂ ಕಣ್ಣುಗಳಿಂದ ಸರಿಯಾಗಿ ದೃಷ್ಟಿ ನೆಡಲು ಸಾಧ್ಯವಿಲ್ಲದಿದ್ದಾಗ ಹೀಗಾಗುತ್ತದೆ. ಇವೆಲ್ಲದರಿಂದ ಕಣ್ಣುಗಳು ಸಮತೋಲನದಲ್ಲಿ ಕೆಲಸ ನಿರ್ವಹಿಸಲು ವಿಫಲವಾಗುವುದರೊಂದಿಗೆ ಎಲ್ಲವೂ ಅಸ್ಪಷ್ಟವಾಗಿ ಗೋಚರಿಸಲಾರಂಭಿಸುತ್ತದೆ.

ಕೆಲವು ಮಕ್ಕಳು ಹುಟ್ಟುವಾಗಲೇ ಮೆಳ್ಳೆಗಣ್ಣಿನಿಂದಲೇ ಹುಟ್ಟುತ್ತವೆ. ಮಕ್ಕಳಲ್ಲಿ ಮೆಳ್ಳೆಗಣ್ಣು ಸಂಭವಿಸುವ ವಯಸ್ಸೆಂದರೆ 10ನೇ ತಿಂಗಳಿಂದ 2 ವರ್ಷದೊಳಗೆ. ಆದರೆ 5ನೇ ವಯಸ್ಸಿನವರೆಗೂ ಇದು ಎಂದಾದರೂ ಸಂಭವಿಸಬಹುದು.

### ಕಾರಣಗಳು

ಮೆಳ್ಳೆಗಣ್ಣಿಗೆ ಇಂಥದ್ದೇ ಕಾರಣ ಎಂದು ಸ್ಪಷ್ಟವಾಗಿ ಎಲ್ಲೂ ಇಲ್ಲ. ಆದರೆ ಮೆಳ್ಳೆಗಣ್ಣಿಗೆ ಕುಟುಂಬದ ಹಿನ್ನೆಲೆಯೂ ಕಾರಣವಾಗಬಹುದು. ಒಂದು ಮಗು ಹುಟ್ಟುವಾಗಲೇ ಮೆಳ್ಳೆಗಣ್ಣನ್ನು ಹೊಂದಿದ್ದರೆ ಅಂಥ ಮಗುವನ್ನು ಅಜನ್ಮ ಮೆಳ್ಳೆಗಣ್ಣು (ಕಂಜೆನ್ನಿಯಲ್ ಸ್ಕ್ವಿಂಟ್) ಎನ್ನಲಾಗುತ್ತದೆ. ಇದು ಕಣ್ಣುಗಳ ಸ್ನಾಯು ದೋಷದಿಂದಾಗಿ ಸಂಭವಿಸಬಹುದಾಗಿದೆ.

ದೂರದೃಷ್ಟಿ ಇರುವವರಲ್ಲೂ ಮೆಳ್ಳೆಗಣ್ಣು ಕಂಡುಬರಬಹುದು. ದೂರದೃಷ್ಟಿ ಇರುವವರಿಗೆ ಸಮೀಪವಿರುವ ವಸ್ತುಗಳು ಸರಿಯಾಗಿ ಗೋಚರಿಸುವುದಿಲ್ಲ. ಈ ಸಮಸ್ಯೆಗೆ ಚಿಕಿತ್ಸೆ ನೀಡದೇ ಹೋದರೆ ಹಾಗೂ ದೃಷ್ಟಿ ಸರಿಪಡಿಸಿಕೊಳ್ಳುವ ಕನ್ನಡಕ ಬಳಸದೇ ಹೋದರೆ ಮೆಳ್ಳೆಗಣ್ಣು ಸಂಭವಿಸಬಹುದು.

ಮತ್ತೂ ಕೆಲವು ಪ್ರಕರಣಗಳಲ್ಲಿ ಸಣ್ಣ ವಯಸ್ಸಿನಲ್ಲಿ ಬಂದ ಸಿಡುಬು ಅಥವಾ ದಢಾರಗಳಿಂದಾಗಿ ಮೆಳ್ಳೆಗಣ್ಣು ಸಂಭವಿಸಬಹುದು. ಆ ಸಂದರ್ಭಕ್ಕೂ ಮುನ್ನವೇ ಮೆಳ್ಳೆಗಣ್ಣಾಗಿರಬಹುದು. ಆದರೆ ಆತ ಅಥವಾ ಆಕೆಯ ದೃಷ್ಟಿ ನೇರವಾಗಿಯೇ ಇರುತ್ತದೆ. ಇದಕ್ಕೆ ಮುಖ್ಯ ಕಾರಣ ಈ ಸಮಸ್ಯೆ ಕಂಡುಬಂದ ಸಂದರ್ಭದಲ್ಲಿ ನರಗಳ ಹಾನಿಗೊಳಗಾಗಿರುತ್ತದೆ.

### ಚಿಕಿತ್ಸೆ ಏಕೆ ಕೊಡಿಸಬೇಕು?

ಒಬ್ಬರ ಕಣ್ಣು ಒಳಗೋ ಅಥವಾ ಹೊರಗೋ ಹೊರಳಿದ್ದರೆ, ಆಗ ಎರಡೂ ಕಣ್ಣುಗಳು ಎರಡು ವಿಭಿನ್ನ ವಸ್ತುಗಳತ್ತ ದೃಷ್ಟಿ ನೆಟ್ಟಿರುತ್ತವೆ. ಹೀಗಾಗಿ



ಎರಡೆರಡು ನೋಟ ಉಂಟಾಗುತ್ತದೆ. ಹೀಗೆ ಎರಡು ವಸ್ತುಗಳನ್ನು ಏಕಕಾಲದಲ್ಲಿ ದೃಷ್ಟಿಸುವುದು ಮಗುವಿನ ಮೆದುಳಿನ ಮೇಲೂ ಸಾಕಷ್ಟು ತೊಂದರೆ ಉಂಟುಮಾಡುತ್ತದೆ. ಹೀಗಾಗಿ ಎರಡು ವಸ್ತುಗಳನ್ನೂ ಗ್ರಹಿಸುವುದರ ಬದಲಾಗಿ ಒಂದನ್ನು ಗ್ರಹಿಸದೇ ಬಿಟ್ಟುಬಿಡುತ್ತದೆ. ಇದರಿಂದ ಮಗು ನೇರವಾಗಿರುವ ಕಣ್ಣಿನಿಂದ ನೋಡಿದ್ದನ್ನು ಮಾತ್ರ ಗ್ರಹಿಸಿ, ಮೆಳ್ಳೆಗಣ್ಣಿನಿಂದ ಗ್ರಹಿಸಿದ ವಸ್ತುವನ್ನು ಅಡಗಿಸಿ ಬಿಡುತ್ತದೆ. ಕ್ರಮೇಣ ಮೆಳ್ಳೆಗಣ್ಣು ಗ್ರಹಿಸಿದ ವಸ್ತುವನ್ನು ಮೆದುಳು ಗ್ರಹಿಸದೇ ಇರುವುದರಿಂದ ಆ ಕಣ್ಣಿನ ದೃಷ್ಟಿ ದುರ್ಬಲವಾಗಬಹುದು ಹಾಗೂ ಮೆಳ್ಳೆಗಣ್ಣಿನ ಬಳಕೆಯೇ ಸ್ಥಗಿತಗೊಂಡಿದ್ದರಿಂದ ಕುರುಡಾಗುವ ಸಾಧ್ಯತೆಗಳೂ ಹೆಚ್ಚಿರುತ್ತದೆ. ಹೀಗಾಗಿ ಚಿಕಿತ್ಸೆ ಕೊಡಿಸುವುದು ಅತ್ಯಾವಶ್ಯಕ.

ಇದರೊಂದಿಗೆ ಮೆಳ್ಳಗಣ್ಣಿನಿಂದ ಮತ್ತೊಂದು ರೀತಿಯ ತೊಂದರೆ ಇದೆ. ಸಾಮಾನ್ಯವಾಗಿ ಎರಡೂ ಕಣ್ಣುಗಳು ವಿಭಿನ್ನ ದೃಷ್ಟಿಕೋನದಿಂದ ಒಂದೇ ವಸ್ತುವಿನತ್ತ ದೃಷ್ಟಿ ನೆಟ್ಟಿರುತ್ತವೆ. ಹೀಗಾಗಿ ವಸ್ತುವಿನತ್ತ ಆಳವಾದ ನೋಟ ಅಥವಾ 3ಡಿ ದೃಷ್ಟಿ ನೆಡುವುದು ಸಾಮಾನ್ಯ. ಒಂದು ಕಣ್ಣು ಒಳಗೆ ಅಥವಾ ಹೊರ ಭಾಗಕ್ಕೆ ಹೊರಳಿಕೊಂಡರೆ ಈ ರೀತಿಯ ಸೌಲಭ್ಯ ಕಳೆದುಕೊಳ್ಳಬೇಕಾಗುತ್ತದೆ. ಹೀಗಾಗಿ ಮೆಳ್ಳೆಗಣ್ಣಿರುವ ಮಗು ಏಕಕಾಲದಲ್ಲಿ ಕೇವಲ ಒಂದು ಕಣ್ಣನ್ನು ಮಾತ್ರ ಬಳಸುವುದರಿಂದ, ಮಗುವಿಗೆ 3ಡಿ ದೃಷ್ಟಿ ಸಾಧ್ಯವಿಲ್ಲ.

ಇವೆಲ್ಲಕ್ಕಿಂಥ ಬಹುಮುಖ್ಯ ಹಾಗೂ ಯಾರೂ ಸರಿಯಾಗಿ ಗಮನಿಸದ ಮತ್ತೊಂದು ಸಮಸ್ಯೆ ಎಂದರೆ ಮಾನಸಿಕ ತೊಂದರೆ. ಎಂದರೆ ಮೆಳ್ಳೆಗಣ್ಣಿರುವ ಮಗು ಶಾಲೆ ಅಥವಾ ಸಮಾಜದಲ್ಲಿ ಎದುರಿಸುವ ಸಾಕಷ್ಟು ಅವಮಾನಗಳು. ಮೆಳ್ಳೆಗಣ್ಣಿನ ಚಿಕಿತ್ಸೆಗೆ ಬರುವ ಬಹುತೇಕರ ಬಳಿ ಅವರ ಒಂದೂ ಭಾವಚಿತ್ರ ಇರುವುದಿಲ್ಲ. ಯಾವುದೇ ಸಮಾರಂಭ ಅಥವಾ ಸಭೆಗಳಿಗೆ ಅವರು ಹೋಗಲು ಹಿಂಜರಿಯುತ್ತಾರೆ ಹಾಗೂ ಛಾಯಾಚಿತ್ರ ತೆಗೆಸಿಕೊಳ್ಳಲು ನಿರಾಕರಿಸುತ್ತಾರೆ. ಹೀಗಾಗಿ ಈ ಮಕ್ಕಳು ಕೀಳರಿಮೆ ಹಾಗೂ ಒತ್ತಡದಿಂದ ಬಳಲುತ್ತಿರುತ್ತಾರೆ.

### ಆರಂಭದ ಚಿಕಿತ್ಸೆ


ಮಗು ಹುಟ್ಟಿದ ತಕ್ಷಣವೇ, ಅದರ ದೃಷ್ಟಿ ದುರ್ಬಲವಾಗಿದ್ದು ಹಾಗೂ ಅತೀ ಹತ್ತಿರದಿಂದ ಮಾತ್ರ ದೊಡ್ಡ ವಸ್ತುಗಳನ್ನು ನೋಡಲು ಸಾಧ್ಯವಾಗುತ್ತದೆ. ಮಗು ಹೊರಗಿನ ಪ್ರಪಂಚ ನೋಡಲು ಆರಂಭಿಸಿದೊಡನೆ, ನೋಡುವ ದೃಷ್ಟಿಯೂ ಸಹ ಪ್ರಭುತ್ವ ಪಡೆದುಕೊಳ್ಳುತ್ತದೆ. ಶೇಕಡಾ 80 ರಷ್ಟು ಈ ರೀತಿಯ ಬೆಳವಣಿಗೆ ಮೊದಲ ಎರಡು ವರ್ಷಗಳಲ್ಲಿ ಆಗುತ್ತದೆ. ಇನ್ನುಳಿದ ಶೇಕಡಾ 20ರಷ್ಟು ಭಾಗ 8ನೇ ವರ್ಷ ಪೂರ್ಣಗೊಳ್ಳುವುದರ ಒಳಗೆ ಆಗುತ್ತದೆ.

ಮೊದಲ ಕೆಲವು ವರ್ಷಗಳಲ್ಲಿ ಸಾಮಾನ್ಯ ದೃಷ್ಟಿಯಲ್ಲಿ ಏನಾದರೂ ತೊಂದರೆ ಕಂಡುಬಂದರೆ (ಮೆಳ್ಳೆಗಣ್ಣಿನಿಂದ ಆಗಿರಬಹುದು ಅಥವಾ ಕಣ್ಣಿನಪೊರೆಯಿಂದ ಆಗಬಹುದು ಅಥವಾ ದೂರದೃಷ್ಟಿ/ ಸಮೀಪದೃಷ್ಟಿಯಿಂದ ಆಗಬಹುದು) ಅದು ಶಾಶ್ವತ ಅಂಧತ್ವಕ್ಕೆ ಕಾರಣವಾಗಬಹುದು. ಇದನ್ನು ಆಂಬ್ಲೋಪಿಯಾ ಅಥವಾ ಆಲಸಿ ಕಣ್ಣು ಎಂದು ಕರೆಯಲಾಗುತ್ತದೆ. ದೂರದೃಷ್ಟಿಯ ಬೆಳವಣಿಗೆ ಅಥವಾ ಆಳವಾದ ನೋಟಗಳು ಎರಡು ವರ್ಷದೊಳಗೇ ಸಂಪೂರ್ಣವಾಗುತ್ತದೆ.

ಹೀಗಾಗಿ ಆರಂಭದಲ್ಲೇ ಅಂದರೆ ಎರಡು ವರ್ಷದೊಳಗೇ ಈ ಸಮಸ್ಯೆಯನ್ನು ಗಮನಿಸಿ ಚಿಕಿತ್ಸೆ ನೀಡಿದರೆ ಆಲಸಿ ಕಣ್ಣು ಹಾಗೂ ದೂರದೃಷ್ಟಿಯ ಕೊರತೆಯನ್ನು ನೀಗಿಸಬಹುದಾಗಿದೆ. 18 ವರ್ಷದ ನಂತರ ದೃಷ್ಟಿಯನ್ನು ಉತ್ತಮಗೊಳಿಸಲು ಆಗುವುದಿಲ್ಲ. ವಯಸ್ಕರಲ್ಲಿ ಮೆಳ್ಳೆಗಣ್ಣಿನ ಶಸ್ತ್ರಚಿಕಿತ್ಸೆ ನಡೆಸಬಹುದಷ್ಟೇ. ಆದರೆ ಅದು ಬಹುತೇಕ ವಯಸ್ಕರಲ್ಲಿ ಕೇವಲ ಸೌಂದರ್ಯಕ್ಕಾಗಿ ಮಾತ್ರ.

### ಚಿಕಿತ್ಸೆ

ಮೆಳ್ಳೆಗಣ್ಣು ಮಿತಿ ಮೀರಿ ಬೆಳೆಯುವುದಿಲ್ಲ, ಹಾಗೂ ಇದು ತನ್ನಿಂದ ತಾನೆ ಉತ್ತಮವಾಗುವುದೂ ಇಲ್ಲ. ದೃಷ್ಟಿಯನ್ನು ನೇರಗೊಳಿಸಲು ಚಿಕಿತ್ಸೆಯ ಅಗತ್ಯವಿದೆ. ಆದಷ್ಟು ಬೇಗ ಚಿಕಿತ್ಸೆ ಆರಂಭಿಸಬೇಕು ಹಾಗೂ ಮೂರು ತಿಂಗಳ ಮಕ್ಕಳ ತಪಾಸಣೆ ನಡೆಸಿ ಏನಾದರೂ ತೊಂದರೆ ಇದ್ದಲ್ಲಿ ಚಿಕಿತ್ಸೆ ಕೊಡಿಸಬೇಕು.



### ಚಿಕಿತ್ಸೆಯ ಗುರಿ

1. ದೃಷ್ಟಿ ಸರಿಪಡಿಸುವುದು
2. ಕಣ್ಣುಗಳನ್ನು ನೇರ ಮಾಡುವುದು
3. ಮಸೂರ ದೃಷ್ಟಿಯನ್ನು ಮರುಸ್ಥಾಪಿಸುವುದು.

ಮೇಲಿನ ಚಿಕಿತ್ಸೆಗಳನ್ನು ಒಂದೊಂದಾಗಿ ಅಥವಾ ಒಟ್ಟಿಗೆ ನೀಡಬಹುದಾಗಿದೆ. ಇವೆಲ್ಲವೂ ಮೆಳ್ಳೆಗಣ್ಣು ಸರಿಪಡಿಸುವ ಚಿಕಿತ್ಸೆಯ ರೂಪ ಹಾಗೂ ಅದರ ಪರಿಣಾಮದ ಮೇಲೆ ಅವಲಂಬಿತ.

* ಮಸೂರಗಳನ್ನು ಸಾಮಾನ್ಯವಾಗಿ ಚಿಕಿತ್ಸೆಯ ರೂಪದಲ್ಲಿ ನೀಡಲಾಗುವುದು. ಇದರಿಂದ ದೃಷ್ಟಿಯ ಗುಣಮಟ್ಟ ಉತ್ತಮ ಪಡಿಸುವುದರೊಂದಿಗೆ ನೇರ ದೃಷ್ಟಿ ಮರುಸ್ಥಾಪಿಸಲು ಅನುಕೂಲವಾಗಲಿದೆ.
* ಶಸ್ತ್ರಚಿಕಿತ್ಸೆಯ ಮುನ್ನ ಒಂದು ಕಣ್ಣಿನ ದೃಷ್ಟಿ ಉತ್ತಮ ಪಡಿಸುವುದು ಅತ್ಯಗತ್ಯ.
* ಚಿಕಿತ್ಸೆಯ ರೂಪದಲ್ಲಿ ಐ ಡ್ರಾಪ್‌ಗಳು ಅಥವಾ ಮುಲಾಮುಗಳನ್ನು ಬಳಸಬಹುದು. ಕೆಲವು ಪ್ರಕರಣಗಳಲ್ಲಿ ಕನ್ನಡಕಗಳನ್ನು ಬಳಸಲೂಬಹುದು ಅಥವಾ ಬಿಡಲೂಬಹುದು.
* ಕಣ್ಣುಗಳನ್ನು ನೇರ ಮಾಡಲು ಕಣ್ಣುಗಳ ಸ್ನಾಯುಗಳ ಮೇಲೆ ಶಸ್ತ್ರಚಿಕಿತ್ಸೆ ನಡೆಸಲಾಗುವುದು. ಶಸ್ತ್ರಚಿಕಿತ್ಸೆ ಇಲ್ಲದಿದ್ದರೆ ಇದನ್ನು ಸರಿಪಡಿಸಲು ಅಸಾಧ್ಯ.
* ಶಸ್ತ್ರಚಿಕಿತ್ಸೆಯ ನಂತರ ಕಣ್ಣನ್ನು ಸರಿಪಡಿಸಲು ಕಣ್ಣಿನ ವ್ಯಾಯಾಮ, ಚಿಕಿತ್ಸೆಯ ಪರಿಮಿತಿ ಇರಲೇಬೇಕು.

ಹೆಚ್ಚುವರಿ ಕಣ್ಣಿನ ತಪಾಸಣೆ ವಿಧಾನವಾದ್ದರಿಂದ ಕಣ್ಣಿನ ಎಲ್ಲಾ ಶಸ್ತ್ರಚಿಕಿತ್ಸೆಗಿಂತಲೂ ಮೆಳ್ಳೆಗಣ್ಣಿನ ಶಸ್ತ್ರಚಿಕಿತ್ಸೆ ಅತ್ಯಂತ ಸುರಕ್ಷಿತ ಹಾಗೂ ಇದು ಕಣ್ಣುಗುಡ್ಡೆಗಳನ್ನು ತೆರೆಯಲು ಅವಕಾಶ ನೀಡುವುದಿಲ್ಲ. ಇದರೊಂದಿಗೆ ಯಾವುದೇ ರೀತಿಯ ಶಸ್ತ್ರಚಿಕಿತ್ಸೆಯ ಗೆರೆಗಳು ಕಾಣಿಸದು.

ಅಂತಿಮವಾಗಿ, ಮೆಳ್ಳೆಗಣ್ಣು ಅದೃಷ್ಟದ ಸಂಕೇತವಲ್ಲ, ಬದಲಾಗಿ ಕುರುಡುತನದ ಮುನ್ಸೂಚನೆ. ಬಹುಶಃ ನಮ್ಮ ಪೂರ್ವಿಕರು ಸಮಾಜದಲ್ಲಿ ಮೆಳ್ಳೆಗಣ್ಣಿರುವವರಿಗೆ ನ್ಯಾಯ ದೊರಕಿಸುವ ಸಲುವಾಗಿ ಹಾಗೂ ಮೆಳ್ಳೆಗಣ್ಣಿರುವವರ ಮನಸ್ಸಿನ ಮೇಲೆ ದುಷ್ಪರಿಣಾಮ ಬೀಳದಂತೆ ತಡೆಯಲು ಹೀಗಂದಿರಬಹುದು. ಎಲ್ಲಾ ಮೂಢನಂಬಿಕೆಗಳಂತೆ ಇದನ್ನೂ ಸಹ ನಾವು ಸತ್ಯವೆಂದು ನಂಬುತ್ತಲೇ ಬರುತ್ತಿದ್ದೇವೆ.

ಮೆಳ್ಳೆಗಣ್ಣನ್ನು ಆರಂಭದಲ್ಲೇ ಪತ್ತೆ ಹಚ್ಚಿದರೆ ಚಿಕಿತ್ಸೆ ಖಂಡಿತವಾಗಿಯೂ ನೀಡಬಹುದು; ಮೆಳ್ಳೆಗಣ್ಣು ತಜ್ಞರಿಂದ ಸರಿಯಾದ ಚಿಕಿತ್ಸೆಯನ್ನೂ ನೀಡಬಹುದು. ಚಿಕಿತ್ಸೆ ಸಂಪೂರ್ಣ ಸುರಕ್ಷಿತ ಹಾಗೂ ಸರಳ. ಯಾವುದಾದರೂ ಮಗು ಮೆಳ್ಳೆಗಣ್ಣಿನಿಂದ ಬಳಲುತ್ತಿದ್ದದು ನಿಮ್ಮ ಗಮನಕ್ಕೆ ಬಂದರೆ ಈ ಮಾಹಿತಿಯನ್ನು ಅವರೊಂದಿಗೆ ಹಂಚಿಕೊಂಡು ಅವರ ದೃಷ್ಟಿ ಉಳಿಸಲು ಸಹಾಯ ಮಾಡಿ.

ಹೆಚ್ಚಿನ ವಿವರಗಳಿಗೆ: (ದೂರವಾಣಿ 9845423955/ 23367544)